ತಂತಿ: ವಾಟರ್ ಸಪ್ ಬೆಂಗಳೂರು
"ನೀರನ್ನು ಮಿತವಾಗಿ ಬಳಸಿ"
"ಕನ್ನಡದಲ್ಲೇ ವ್ಯವಹರಿಸಿ"

FAX : 080-22945102
Phone : 22945107
www.bwssb.gov.in

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

## BANGALORE WATER SUPPLY & SEWERAGE BOARD

1st Floor, Cauvery Bhavan, K.G.Road, Bangalore-560009.

No : BWSSB/CHAD/02-2021/EST-21/ 4029 /2020-21 Date: 23-02-2021

## ಅಧಿಸೂಚನೆ

ವಿಷಯ: ಬೆಂಗಳೂರು ಜಲಮಂಡಳಿಯ ವಲಯವಾರು ಮುಖ್ಯಸ್ಥರುಗಳನ್ನು (Head of Department) ನ್ಯಾಯಾಲಯ, ನ್ಯಾಯಾಧೀಕರಣ ಹಾಗೂ ಪ್ರಾಧಿಕಾರಗಳ ಪ್ರಕರಣಗಳಿಗೆ ಸಂಬಂಧಪಟ್ಟಂತೆ ನಿಯೋಜಿಸುವ ಮತ್ತು ಅವರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವ ಬಗ್ಗೆ.

ಉಲ್ಲೇಖ:
1. BWSSB:ಮುಅಅ-ಕಾ/ಸಿಗು-2/3247/ 2019-20 ದಿನಾಂಕ: 08.11.2019
2. ನಅಇ 06 ಸಮನ್ವಯ 2021 ದಿನಾಂಕ: 07.01.2021
3. ಕಾನೂನು ಅಧಿಕಾರಿಯವರ ಅಭಿಪ್ರಾಯ ದಿನಾಂಕ: 08.02.2021
4. ಮಾನ್ಯ ಅಧ್ಯಕ್ಷರ ಅನುಮೋದನೆ ದಿನಾಂಕ: 20.02.2021

- - - - -

ಬೆಂಗಳೂರು ಜಲ ಮಂಡಳಿಯ ವಿವಿಧ ವಲಯಗಳಿಗೆ ಸಂಬಂಧಪಟ್ಟಂತೆ ವಲಯವಾರು ಮುಖ್ಯಸ್ಥರು (Head of Department)ಗಳನ್ನಾಗಿ ನಿಯೋಜಿಸಿ ಉಲ್ಲೇಖ(1)ರಂತೆ ಅಧಿಸೂಚನೆ ಹೊರಡಿಸಲಾಗಿತ್ತು. ಪ್ರಸ್ತುತ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಪುನರ್ ವಿನ್ಯಾಸಗೊಂಡ ನಂತರ ಮುಖ್ಯ ಅಭಿಯಂತರರ ವಲಯವಾರುಗಳಲ್ಲಿ ಬದಲಾವಣೆಗಳಾಗಿ ಹೆಚ್ಚು ವಲಯಗಳಾಗಿರುವುದರಿಂದ ಉಲ್ಲೇಖ(1)ರಲ್ಲಿ ಹೊರಡಿಸಿರುವ ಅಧಿಸೂಚನೆಯಲ್ಲಿ ವಲಯವಾರು ಮುಖ್ಯಸ್ಥರು (Head of the Department)ಗಳಲ್ಲಿ ಮಾರ್ಪಾಡು ಮಾಡಿ ಈ ಕೆಳಕಂಡಂತೆ ನಿಯೋಜಿಸಿ ಆದೇಶಿಸಿದೆ.

| ಕ್ರ.ಸಂ. | ವಲಯಗಳ ಹೆಸರು | ವಲಯವಾರು ಮುಖ್ಯಸ್ಥರು (Head of the Department) |
|---|---|---|
| 1. | ಎಲ್ಲಾ ಮುಖ್ಯ ಅಭಿಯಂತರರು ವಲಯಗಳ ಮುಖ್ಯಸ್ಥರು | ಪ್ರಧಾನ ಮುಖ್ಯ ಅಭಿಯಂತರರು |
| 2. | ಆಡಳಿತ ವಲಯ | ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ |
| 3. | ಆರ್ಥಿಕ ವಲಯ | ಆರ್ಥಿಕ ಸಲಹೆಗಾರರು ಹಾಗೂ ಮುಖ್ಯ ಲೆಕ್ಕಾಧಿಕಾರಿ |
| 4. | ತ್ಯಾಜ್ಯ ನೀರು ನಿರ್ವಹಣಾ ವಲಯ | ಮುಖ್ಯ ಅಭಿಯಂತರರು (ತ್ಯಾಜ್ಯ ನೀರು ನಿರ್ವಹಣೆ) |
| 5. | ತ್ಯಾಜ್ಯ ನೀರು ನಿರ್ವಹಣೆ-110ಹಳ್ಳಿ ವಲಯ | ಮುಖ್ಯ ಅಭಿಯಂತರರು (ತ್ಯಾಜ್ಯ ನೀರು ನಿರ್ವಹಣೆ-110ಹಳ್ಳಿ) |
| 6. | ನಿರ್ವಹಣಾ ವಲಯ (ಪೂರ್ವ) | ಮುಖ್ಯ ಅಭಿಯಂತರರು (ಪೂರ್ವ) |
| 7. | ನಿರ್ವಹಣಾ ವಲಯ (ಪಶ್ಚಿಮ) | ಮುಖ್ಯ ಅಭಿಯಂತರರು (ಪಶ್ಚಿಮ) |
| 8. | ಕಾವೇರಿ ವಲಯ | ಮುಖ್ಯ ಅಭಿಯಂತರರು (ಕಾವೇರಿ) |
| 9. | ವಿನ್ಯಾಸ ವಲಯ | ಮುಖ್ಯ ಅಭಿಯಂತರರು (ವಿನ್ಯಾಸ) |

ಮೇಲ್ಕಂಡಂತೆ ನಿಯೋಜಿಸಲಾದ ವಲಯಗಳ ಮುಖ್ಯಸ್ಥರುಗಳಿಗೆ ಅವರುಗಳು ಈಗಾಗಲೇ ನಿರ್ವಹಿಸುತ್ತಿರುವ ಕರ್ತವ್ಯಗಳೊಂದಿಗೆ ನ್ಯಾಯಾಲಯ, ನ್ಯಾಯಾಧಿಕರಣ ಹಾಗೂ ಪ್ರಾಧಿಕಾರಗಳ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಈ ಕೆಳಕಂಡಂತೆ ಅವರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವಂತೆ ಈ ಮೂಲಕ ಆದೇಶಿಸಲಾಗಿದೆ.

...2..

(11) ಕಾನೂನು (MIS & IT)

1. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪರ ಮತ್ತು ವಿರುದ್ಧ ಹೂಡಲಾದ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮಂಡಳಿಯ ಮಾನ್ಯ ಅಧ್ಯಕ್ಷರನ್ನು ಪಕ್ಷಗಾರರನ್ನಾಗಿ ಮಾಡಿದಾಗ ಮೇಲ್ಕಂಡಂತೆ ನಿಯೋಜಿಸಲಾದ ಸಂಬಂಧಪಟ್ಟ ವಲಯಗಳ ಕಾರ್ಯಕ್ಕೆ ಸಂಬಂಧಪಟ್ಟಂತೆ ಅದೇ ವಲಯಗಳ ಮುಖ್ಯಸ್ಥರನ್ನು ಅಧಿಕೃತ ಅಧಿಕಾರಿ/ನೋಡಲ್ ಅಧಿಕಾರಿಯಾಗಿ ಮಾನ್ಯ ಅಧ್ಯಕ್ಷರ ಪರವಾಗಿ ಸಂಬಂಧಪಟ್ಟ ನ್ಯಾಯಾಲಯ, ನ್ಯಾಯಾಧಿಕರಣ ಹಾಗೂ ಪ್ರಾಧಿಕಾರಗಳಲ್ಲಿ ವಕಾಲತ್ತುಗಳನ್ನು ಸಹಿ ಮಾಡಿ ಸಲ್ಲಿಸಲು ಮತ್ತು ಹಾಜರಾಗಲು ನಿರ್ದೇಶಿಸಲಾಗಿದೆ.

2. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಪರ ಮತ್ತು ವಿರುದ್ಧ ಹೂಡುವ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಹಾಗೂ ಪ್ರಾಧಿಕಾರಗಳ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮಂಡಳಿಯ ಮಾನ್ಯ ಅಧ್ಯಕ್ಷರನ್ನು ಪಕ್ಷಗಾರರನ್ನಾಗಿ ಮಾಡಿದಾಗ ಆಯಾಯ ವಲಯಗಳ ಕಾರ್ಯಕ್ಕೆ ಸಂಬಂಧಪಟ್ಟ ಪ್ರಕರಣಗಳಿಗೆ ಮೇಲ್ಕಾಣಿಸಿದಂತೆ ಅದೇ ವಲಯದ ಮುಖ್ಯಸ್ಥರನ್ನು ದಾವೆಗಳಿಗೆ, ತರಕಾರುಗಳಿಗೆ ಮತ್ತು ಇನ್ನಿತರ ಅರ್ಜಿಗಳಿಗೆ, ಪತ್ರಗಳಿಗೆ ಸಹಿ ಹಾಕಲು, ಅಗತ್ಯ ದಾಖಲೆಗಳನ್ನು ಮತ್ತು ಮಾಹಿತಿಗಳನ್ನು ಸಲ್ಲಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

3. ಮೇಲ್ಕಾಣಿಸಿದ ಇಲಾಖಾ ಮುಖ್ಯಸ್ಥರು ಅವರ ವಲಯಗಳ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಕಡತ ನಿರ್ವಹಿಸಿ ಅವುಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸಲು ತಮ್ಮ ಅಧೀನದಲ್ಲಿರುವ ನುರಿತ ಮತ್ತು ಪ್ರಕರಣಗಳ ಬಗ್ಗೆ ವಿಷಯದ ಮಾಹಿತಿ ಹೊಂದಿದ ಹಿರಿಯ ಅಧಿಕಾರಿಯನ್ನು ದಾವಾ ನಿರ್ವಹಣಾಧಿಕಾರಿಯಾಗಿ ನೇಮಿಸಿ ಮಂಡಳಿಯ ವಕೀಲರು ಮತ್ತು ಕಾನೂನು ಅಧಿಕಾರಿಯವರೊಂದಿಗೆ ಸೂಕ್ತ ಸಲಹೆ ಪಡೆದು ಪ್ರಕರಣವನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸಲು ಎಲ್ಲಾ ರೀತಿಯಲ್ಲಿ ಕ್ರಮ ಕೈಗೊಳ್ಳಲು ಭಾದ್ಯಸ್ಥರಾಗಿರುತ್ತಾರೆಂದು ಈ ಮೂಲಕ ನಿರ್ದೇಶಿಸಲಾಗಿದೆ.

4. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸಂಬಂಧಪಟ್ಟಂತೆ ಕ್ರ.ಸಂ 1 ರಿಂದ 3ರಂತೆ ವಿವರಿಸಿದ ಪ್ರಕರಣಗಳಲ್ಲಿ ಯಾವುದೇ ಒಂದು ಪ್ರಕರಣ ಎರಡು ಅಥವಾ ಹೆಚ್ಚು ವಲಯಗಳ ವಿಷಯಗಳಿಗೆ ಸಂಬಂಧಪಟ್ಟಲ್ಲಿ ಆ ಎಲ್ಲಾ ವಲಯ ಮುಖ್ಯಸ್ಥರು ಸಮನ್ವಯವಾಗಿ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು.

5. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪರ ಮತ್ತು ವಿರುದ್ಧ ಹೂಡುವ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಹಾಗೂ ಪ್ರಾಧಿಕಾರಗಳ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮೇಲ್ಕಾಣಿಸಿದ ವಲಯ ಮುಖ್ಯಸ್ಥರ, ದಾವಾ ನಿರ್ವಹಣಾಧಿಕಾರಿಗಳ, ವಕೀಲರ ಮತ್ತು ಕಾನೂನು ಅಧಿಕಾರಿರವರ ಕರ್ತವ್ಯ ಮತ್ತು ಭಾದ್ಯಸ್ಥಗಳ ಬಗ್ಗೆ ಸರ್ಕಾರಿ ವ್ಯಾಜ್ಯಗಳ ನಿರ್ವಹಣಾ ನಿಯಮಗಳು, 1985ರ ನಿಯಮಗಳನ್ನು ಸಮಯೋಜಿತ ಬದಲಾವಣೆಯೊಂದಿಗೆ ಅನುಸರಿಸಿ ಪ್ರಕರಣಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸಲು ಭಾದ್ಯಸ್ಥರಾಗಿರುತ್ತಾರೆಂದು ತಿಳಿಸಲಾಗಿದೆ.

6. ಸರ್ಕಾರದ ವಿವಿಧ ಇಲಾಖೆಗಳು, ಸಂಘ, ಸಂಸ್ಥೆಗಳು ಆಯಾ ವಲಯಗಳಿಗೆ ಸಂಬಂಧಿಸಿದಂತೆ ಕೋರುವ ಮಾಹಿತಿಗಳನ್ನು ನಿಗಧಿತ ಅವಧಿಯಲ್ಲಿ ಸಂಬಂಧಪಟ್ಟವರಿಗೆ ಒದಗಿಸಲು ಸೂಕ್ತ ಕ್ರಮವಹಿಸುವುದು ಆಯಾ ವಲಯಗಳ ಮುಖ್ಯಸ್ಥರುಗಳ ಜವಾಬ್ದಾರಿಯಾಗಿರುತ್ತದೆ.

7. ನಗರಾಭಿವೃದ್ಧಿ ಇಲಾಖೆಯಿಂದ ರವಾನಿಸಲ್ಪಡುವ ಜಲಮಂಡಳಿಗೆ ಸಂಬಂಧಪಟ್ಟ ನ್ಯಾಯಾಲಯಗಳ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯಗಳು ನೀಡುವ ತೀರ್ಪನ್ನು ಕಾಲ ಮಿತಿಯೊಳಗೆ ಅನುಷ್ಠಾನಗೊಳಿಸಲು ಅಥವಾ ಮೇಲ್ಮನವಿ ಸಲ್ಲಿಸುವಂತಹ ಪ್ರಕರಣಗಳಲ್ಲಿ ನಿಗಧಿತ ಅವಧಿಯಲ್ಲಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ವಲಯಗಳ ಮುಖ್ಯಸ್ಥರುಗಳನ್ನೇ ಸಮನ್ವಯ ಅಧಿಕಾರಿ/ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಿದೆ. ಸದರಿ ಸಮನ್ವಯ ಅಧಿಕಾರಿ/ನೋಡಲ್ ಅಧಿಕಾರಿಯವರು 15 ದಿನಗಳಿಗೊಮ್ಮೆ ನ್ಯಾಯಾಲಯಗಳ ಪ್ರಕರಣಗಳಿಗೆ ಸಂಬಂಧಿಸಿದ ತೀರ್ಪನ್ನು ಸಮೀಕ್ಷಿಸಿ ನ್ಯಾಯಾಲಯದ ತೀರ್ಪನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಅಥವಾ ಒಂದು ವೇಳೆ ಅಗತ್ಯವಿದ್ದಲ್ಲಿ ನಿಗಧಿತ ಅವಧಿಯೊಳಗೆ ಮೇಲ್ಮನವಿ ಸಲ್ಲಿಸಲು ಮಂಡಳಿಯ ವಕೀಲರು ಮತ್ತು ಕಾನೂನು ಅಧಿಕಾರಿಯವರೊಂದಿಗೆ ಸೂಕ್ತ ಸಲಹೆ ಪಡೆದು ಪ್ರಕರಣವನ್ನು ವ್ಯವಸ್ಥಿತವಾದ ರೀತಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು.

[signature] 23/2/21

ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ
ಬೆಂಗಳೂರು ಜಲಮಂಡಳಿ

23/2/21 23/2/21 23/2/21

ಪ್ರತಿಯನ್ನು :

1. ಮಾನ್ಯ ಅಧ್ಯಕ್ಷರು, ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಪ್ರ.ಮು.ಅ/ಎಲ್ಲಾ ಮು.ಅ/ಅ.ಮು.ಅ ರವರ ಅವಗಾಹನೆಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಆ.ಅ/ಆ.ಸ–ಮುಲೆಅ/ಸ.ನಿ(ಲೆ)/ಸಾ.ಸಂ.ಅ/ಕಾನೂನು ಅಧಿಕಾರಿ/ವೈದ್ಯಾಧಿಕಾರಿ/ಸಾ.ಸಂ.ಅ/ ಕಾ.ನಿ.ಅ (ಎನ್.ಐ & ಪಿ.ಓ) ರವರ ಮಾಹಿತಿಗಾಗಿ.
4. ಎಲ್ಲಾ ಲೆ.ಅ/ಸಿ.ನಿ.ಅ/ಸ.ಸಿ.ವ್ಯ ರವರ ಗಮನಕ್ಕಾಗಿ.
5. ಹಿ.ವ್ಯ/ಅಧೀಕ್ಷಕರು ಅಧ್ಯಕ್ಷರ ಕಛೇರಿ/ಸಿಗು–2, 13, ಸಿ.ಗು–10 ರವರ ಗಮನಕ್ಕಾಗಿ.
6. ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ, ಬೆಂ.ಜ.ಮಂ ನೌಕರರ ಸಂಘ/ಸ್ಯಾನಿಟರಿ ವರ್ಕರ್ಸ್ ಯೂನಿಯನ್/ಬೆಂ.ಜ.ಮಂ. ಅಭಿಯಂತರರ ಸಂಘ/ಪ.ಜಾ. ಮತ್ತು ಪ.ಪಂ. ಕ್ಷೇಮಾಭಿವೃದ್ಧಿ ಸಂಘ ರವರ ಮಾಹಿತಿಗಾಗಿ.